# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್–ಸಂಖ್ಯೆ 129 ರಲ್ಲಿ ದಿನಾಂಕ:09.08.2021 ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು.**

ದಿನಾಂಕ: 09.08.2021 ರಂದು ವಾರ್ಡ್ ಸಂಖ್ಯೆ 129ರ ಆಗಸ್ಟ್ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ಸ್ಥಳೀಯ ನಿವಾಸಿಗಳ ಕೋರಿಕೆಯ ಮೇರೆಗೆ ಜೂಮ್ ಮೀಟಿಂಗ್ ಮುಖೇನ ನಡೆಸಲಾಯಿತು. ಈ ಕೆಳಕಂಡಂತೆ ಸದಸ್ಯರು / ಸಾರ್ವಜನಿಕರು ಭಾಗವಹಿಸಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಜಿ.ವಿಶ್ವನಾಥ್, ವಾರ್ಡ್ 129 ನೋಡಲ್ ಅಧಿಕಾರಿ
2. ಶ್ರೀ ಬಸವರಾಜು ಎನ್. ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿ ನಗರ ಉಪ ವಿಭಾಗ.
3. ಶ್ರೀ.ಮಂಜುನಾಥ್ ಆರ್ ಮಾರ್ಷಲ್ ವಾರ್ಡ್–129
4. ಶ್ರೀ.ಭಟ್, ವಾರ್ಡ್–129 14ನೇ ಬ್ಲಾಕಿನ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ
5. ಶ್ರೀಮತಿ ಶೋಭಾ ಭಟ್, ವಾರ್ಡ್–129 14ನೇ ಸ್ಥಳೀಯ ನಿವಾಸಿ 3ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿನಗರ.
6. ಶ್ರೀ.ರಾಮಣ್ಣ, ಸ್ಥಳೀಯ ನಿವಾಸಿ, ಎನ್.ಜಿ.ಇ.ಎಫ್ ಬಡಾವಣೆ, ಮಲ್ಲತ್ತಹಳ್ಳಿ.
7. ಶ್ರೀ.ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129
8. ಶ್ರೀ.ವಿ.ಉಡುಪ, ಅನ್ನಪೂರ್ಣೇಶ್ವರಿನಗರ, ಮತ್ತು ಇತರರು.

ಕೋವಿಡ್–19 ವೈರಾಣು ವ್ಯಾಪಕವಾಗಿ ಹರಡುತ್ತಿರುವುದರಿಂದ ಹಾಗೂ ಪ್ರತಿ ಮಾಹೆ ನಡೆಸಲಾಗುತ್ತಿದ್ದ ವಾರ್ಡ್ ಸಮಿತಿಯ ಸಭೆಯನ್ನು ಜೂಮ್ ಮೀಟಿಂಗ್ ಅನ್ವಯ ಎಲ್ಲಾರನ್ನು ಆಹ್ವಾನಿಸಿ ಸಭೆಯನ್ನು ನಡೆಸಲಾಯಿತು. ಸದರಿ ಜೂಮ್ ಮೀಟಿಂಗ್‌ನಲ್ಲಿ ಭಾಗವಹಿಸಿದ್ದ, ಎಲ್ಲಾ ಸ್ಥಳೀಯ ನಿವಾಸಿಗಳನ್ನು/ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ನೋಡಲ್ ಅಧಿಕಾರಿಗಳು ವಾರ್ಡ್ 129 ರವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಯಿತು.

- ಸಾರ್ವಜನಿಕರು ವಾರ್ಡ್ ವ್ಯಾಪ್ತಿಯ ಹಲವು ಬಡಾವಣೆಯಲ್ಲಿ ರಸ್ತೆ ಬದಿ ನಾಮಫಲಕ (Street Name Board) ಇಲ್ಲವೆಂದು ದೂರು ನೀಡಿದರು. ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿ ನಗರ ಉಪ ವಿಭಾಗ ರವರು ಬಿಬಿಎಂಪಿ ಆಯವ್ಯಯದ 2021–22 ನೇ ಸಾಲಿನಲ್ಲಿ ವಾರ್ಡ್‌ವಾರು ಹಂಚಿಕೆಯಾಗಿರುವ ಅನುದಾನದ ಬಗ್ಗೆ ವಿವರಿಸಿ ರಸ್ತೆ ಬದಿ ನಾಮಫಲಕ (Street Name Board) ಅಳವಡಿಸಲು ವಾರ್ಡ್ ಸಂಖ್ಯೆ–129 ಕ್ಕೆ ಅನುದಾನ ಮೀಸಲಿರಿಸಿರುವುದಿಲ್ಲವೆಂದು ತಿಳಿಸಿದರು. ಇದಕ್ಕೆ ಉತ್ತರಿಸಿದ ನೋಡಲ್ ಅಧಿಕಾರಿಗಳು ಬಿದ್ದು ಹೋಗಿರುವ ಹಳೆಯ ನಾಮಫಲಕಗಳನ್ನೇ ದುರಸ್ಥಿಪಡಿಸಿದಲ್ಲಿ ಇನ್ನೂ ಎರಡು ವರ್ಷಗಳವರೆಗೆ ಉಪಯೋಗಿಸಬಹುದೆಂದು ಅಭಿಪ್ರಾಯಿಸಿದರು.
- ಕಳೆದ ಸಭೆಯಲ್ಲಿ ಹೆಲ್ತ್ ಬಡಾವಣೆಯ ಸ್ಥಳೀಯ ನಿವಾಸಿ ಒಬ್ಬರು ವಿಟಿಯು ಸ್ಥಳೀಯ ಕಛೇರಿಯ ಹತ್ತಿರ ರಸ್ತೆ ಬದಿಯಲ್ಲಿ ಶೇಖರಿಸಿರುವ ಡೆಬ್ರಿಸ್ ತೆರವುಗೊಳಿಸುವಂತೆ ಕೋರಿದ್ದರು. ಅದರಂತೆ ಡೆಬ್ರಿಸ್ ತೆರವುಗೊಳಿಸಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿರುತ್ತಾರೆ.

- ಜಿಯಾಲಜಿ ಬಡಾವಣೆಯಲ್ಲಿ ರಸ್ತೆ ಬದಿ ಚರಂಡಿ ಅಭಿವೃದ್ಧಿಪಡಿಸಲು ಶ್ರೀ ಶಂಕರ್ ಭಟ್ ರವರು ಈ ಹಿಂದಿನ ಸಭೆಯಲ್ಲಿ ಕೋರಿದ್ದರು. ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರ ಗಮನಕ್ಕೆ ತಂದು ಸದರಿ ರಸ್ತೆ ಬದಿ ಚರಂಡಿಗಳನ್ನು ಅಭಿವೃದ್ಧಿಪಡಿಸಲು ಮತ್ತೊಮ್ಮೆ ಕೋರಲಾಯಿತು.
- ವಸತಿ ಪ್ರದೇಶದಲ್ಲಿ ತಾತ್ಕಾಲಿಕವಾಗಿ ಒಣ ಕಸ ಸಂಗ್ರಹಣಾ ಘಟಕ ಸ್ಥಾಪಿಸಿರುವುದರಿಂದ, ದುರ್ವಾಸನೆ ಬರುತ್ತಿದ್ದು ಬೇರೆಡೆ ಒಣ ಕಸ ಸಂಗ್ರಹಣಾ ಘಟಕ ಸ್ಥಾಪಿಸಲು ಸ್ಥಳೀಯ ನಿವಾಸಿಗಳು ಕೋರಿದರು. ಇದಕ್ಕೆ ಉತ್ತರಿಸಿದ ನೋಡಲ್ ಅಧಿಕಾರಿಗಳು ಈಗಾಗಲೇ ಪ್ರತ್ಯೇಕವಾಗಿ ಒಣ ಕಸ ಸಂಗ್ರಹಣಾ ಘಟಕ ಸ್ಥಾಪಿಸಲು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು ಶೀಘ್ರದಲ್ಲೇ ಕಾಮಗಾರಿ ಪ್ರಾರಂಭಿಸುವುದಾಗಿ ತಿಳಿಸಿರುತ್ತಾರೆ.
- ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಬಹುತೇಕ ದೂರುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಇತ್ಯರ್ಥ ಮಾಡಿರುತ್ತಾರೆ.
- ಎನ್.ಜಿ.ಇ.ಎಫ್ ಬಡಾವಣೆ, ನಾಗರಬಾವಿ 2ನೇ ಹಂತದ ಪಾರ್ಕ್ ಎದುರು ಕಲ್ವರ್ಟ್ ರ್ಯಾಂಪ್ ಹಾಳಾಗಿದ್ದು ಸಾರ್ವಜನಿಕರ ಓಡಾಟಕ್ಕೆ ಅನಾನುಕೂಲ ಉಂಟಾಗಿರುತ್ತದೆ. ಈ ಬಗ್ಗೆ ಕಳೆದ ಆರು ತಿಂಗಳುಗಳಿಂದ ಅಧಿಕಾರಿಗಳ ಗಮನಕ್ಕೆ ತರುತ್ತಿದ್ದರೂ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ಅಲ್ಲಿನ ನಿವಾಸಿಯಾದ ಶ್ರೀ ವೇಣುಗೋಪಾಲ್ ರವರು ದೂರು ನೀಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೂಡಲೇ ರ್ಯಾಂಪ್ ಸರಿಪಡಿಸುವುದಾಗಿ ತಿಳಿಸಿದರು.

ಮುಂದುವರೆದಂತೆ, ವಾರ್ಡ್ 129 ರ ವ್ಯಾಪ್ತಿಯಲ್ಲಿ ಬಹುತೇಕ ರಸ್ತೆಗಳಲ್ಲಿ ಉದ್ಭವಾಗಿರುವ ರಸ್ತೆಗುಂಡಿಗಳೂ/ರಸ್ತೆ ಅಗೆತವನ್ನು ಕೂಡಲೇ ಗುರುತಿಸಿ / ದಾಖಲಿಸಿಕೊಂಡು ಆದ್ಯತೆ ಮೇರೆಗೆ ಮುಚ್ಚಲು ಕ್ರಮವಹಿಸಬೇಕೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು ಹಾಗೂ ಈ ಹಿಂದೆ ಸ್ಥಳೀಯ ನಿವಾಸಿಗಳೂ ದಾಖಲಾಗಿರುವ ದೂರುಗಳಿಗೆ ಸಂಬಂದಿಸಿದಂತೆ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮವಹಿಸಿ ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
3. ಮುಖ್ಯ ಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
4. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅದಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.